# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 21.05.2020ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2020ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ನಡವಳಿಗಳು.**

**ಉಪಸ್ಥಿತ ಸದಸ್ಯರು:**

**ಅನುಪಸ್ಥಿತ ಸದಸ್ಯರು:**

## ಪ್ರಾರಂಭಿಕ

ಪ್ರಾರಂಭದಲ್ಲಿ ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

ಮುಖ್ಯವಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ದಿನಾಂಕ 27.04.2020ರಂದು ಅಧಿಕಾರ ಸ್ವೀಕರಿಸಿರುವ ಕೆ. ರಾಜು ಮೊಗವೀರ, ಕೆ.ಎ.ಎಸ್., ಇವರನ್ನು, ಮಂಗಳೂರು ವಿಶ್ವವಿದ್ಯಾನಿಲಯದಕುಲಸಚಿವರು (ಪರೀಕ್ಷಾಂಗ) ಆಗಿ ಹೊಸದಾಗಿ ನೇಮಕಗೊಂಡಿರುವ ಡಾ. ಪಿ. ಎಲ್. ಧರ್ಮ, ಪ್ರಾಧ್ಯಾಪಕರು, ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಇವರನ್ನು, ದಿನಾಂಕ 31.03.2020 ರಿಂದಪ್ರಭಾರ ಹಣಕಾಸು ಅಧಿಕಾರಿಯಾಗಿಕರ್ತವ್ಯ ನಿರ್ವಹಿಸುತ್ತಿರುವ ಡಾ. ಬಿ. ನಾರಾಯಣ ಇವರನ್ನು ಹಾಗೂ ಸಾರ್ವಜನಿಕ ಶಿಕ್ಷಣ ಆಯುಕ್ತರರ ಪರವಾಗಿ ಸಭೆಗೆ ಹಾಜರಾಗಿರುವ ಶ್ರೀ ಸಿಪ್ರಿಯನ್ ಮೊಂತೆರೊ,ಪ್ರಾಂಶುಪಾಲರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಮಂಗಳೂರು ಇವರನ್ನು ಮಾನ್ಯ ಕುಲಪತಿಯವರು ಸಭೆಗೆ ಪರಿಚಯಿಸಿ ಸ್ವಾಗತಿಸಿದರು.

ಮಂಗಳೂರುವಿಶ್ವವಿದ್ಯಾನಿಲಯದ ಕುಲಸಚಿವರಾಗಿದಿನಾಂಕ 14.08.2018 ರಿಂದದಿನಾಂಕ 27.04.2020 ರವರೆಗೆ ಕರ್ತವ್ಯ ನಿರ್ವಹಿಸಿರುವ ಪ್ರೊ. ಎ. ಎಂ.ಖಾನ್ ಇವರನ್ನು, ದಿನಾಂಕ 14.08.2018 ರಿಂದದಿನಾಂಕ16.03.2020 ರವರೆಗೆಕುಲಸಚಿವರು (ಪರೀಕ್ಷಾಂಗ) ಆಗಿ ಕರ್ತವ್ಯ ನಿರ್ವಹಿಸಿದ ಡಾ.ರವೀಂದ್ರಾಚಾರಿ ವಿ ಇವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿದ ಬಗ್ಗೆ ಸಭೆಗೆ ಮಾಹಿತಿ ನೀಡಿದರು ಹಾಗೂ ಮಾನ್ಯ ರಾಜ್ಯಪಾಲರಿಂದ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ನಾಮನಿರ್ದೇಶನಗೊಂಡಿದ್ದ ಶ್ರೀ ಅಶೋಕ್ ಕುಮಾರ್ ರೈ ಮತ್ತು ಶ್ರೀ ಜಯಪ್ರಕಾಶ್ ಆರ್ ಇವರುಗಳ ಸದಸ್ಯತ್ವದ ಅವಧಿ ಕೊನೆಗೊಂಡಿರುವ ಬಗ್ಗೆ ಸಭೆಗೆ ಮಾಹಿತಿ ನೀಡಿದರು ಮತ್ತು ಹಣಕಾಸು ಅಧಿಕಾರಿಯಾಗಿದ್ದ(ಪ್ರಭಾರ) ಪ್ರೊ. ಶ್ರೀಪತಿ ಕಲ್ಲೂರಾಯ ಪಿ. ಇವರು ದಿನಾಂಕ 31.03.2020 ರಂದು ವಯೋನಿವೃತ್ತಿ ಹೊಂದಿದ ಬಗ್ಗೆ ಮಾಹಿತಿ ನೀಡಿದರು. ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ ಸಿಂಡಿಕೇಟ್ ಸಭೆಗೆ ಹಾಜರಾಗುತ್ತಿದ್ದ ಶ್ರೀಮತಿ ಟಿ. ಎಲ್. ಶಾರದಮ್ಮ, ಪ್ರಾಂಶುಪಾಲರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಮಂಗಳೂರು ಇವರು ದಿನಾಂಕ 29.02.2020ರಂದು ವಯೋನಿವೃತ್ತಿ ಹೊಂದಿರುವ ಬಗ್ಗೆಯೂ ಮಾನ್ಯ ಕುಲಪತಿಗಳು ಮಾಹಿತಿ ನೀಡಿದರು. ಇವರುಗಳು ತಮ್ಮ ಸಿಂಡಿಕೇಟು ಸದಸ್ಯತ್ವದ ಅವಧಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುವುದಕ್ಕಾಗಿ ಇವರಿಗೆ ಸಿಂಡಿಕೇಟ್ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ ಮಾನ್ಯ ಕುಲಪತಿಯವರು ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು.

ದಿನಾಂಕ 21.05.2020ನ್ನು ಭಯೋತ್ಪಾದನೆ ವಿರೋಧಿ ದಿನವನ್ನಾಗಿ ಆಚರಿಸಲು ಮತ್ತು ಕಚೇರಿಗಳಲ್ಲಿ ಪ್ರತಿಜ್ಞೆಯನ್ನು ಸ್ವೀಕರಿಸಲು ಸರಕಾರವುಆದೇಶಿಸಿರುವುದರಿಂದಮಾನ್ಯ ಕುಲಸಚಿವರು ಪ್ರತಿಜ್ಞೆಯನ್ನು ಓದಿದರು. ಸಭೆಯಲ್ಲಿ ಹಾಜರಿದ್ದ ಎಲ್ಲರೂ ಪ್ರತಿಜ್ಞೆಯನ್ನು ಸ್ವೀಕರಿಸಿದರು.

**I ನಡವಳಿಗಳ ದೃಢೀಕರಣ:**

1. ದಿನಾಂಕ 24.02.2020 ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯನಡವಳಿಗಳಲ್ಲಿಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.1:04(2020)ಯಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಸ್ವಾಯತ್ತ ಕಾಲೇಜುಗಳ ಕಾರ್ಯವೈಖರಿಯನ್ನು ವಾರ್ಷಿಕವಾಗಿ ಮರುಪರಿಶೀಲನೆ ಹಾಗೂ

ಮರು ಮೌಲ್ಯಮಾಪನಗೊಳಿಸಲು ಸಮಿತಿ ರಚನೆ ಬಗ್ಗೆಈ ಕೆಳಗಿನ ತಿದ್ದುಪಡಿಯೊಂದಿಗೆ ದೃಢೀಕರಿಸಲಾಯಿತು.

ಮೇಲಿನ ವಿಷಯದ ಕುರಿತಂತೆ ಚರ್ಚೆಯಲ್ಲಿ ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ರಮೇಶ್ ಕೆ ಇವರು ಮಂಗಳೂರು ವಿಶ್ವವಿದ್ಯಾನಿಲಯದ ಸ್ವಾಯತ್ತ ಕಾಲೇಜಿನ ಪ್ರಾಧ್ಯಾಪಕರೊಬ್ಬರು ಯು.ಜಿ.ಸಿ ಮಾನ್ಯತೆ ಪಡೆಯದೆ ಇರುವ ವಿಷಯದಲ್ಲಿಬೇರೊಂದು ವಿಶ್ವವಿದ್ಯಾನಿಲಯದ ಪಿ.ಹೆಚ್.ಡಿ. ಗೈಡ್ ಆಗಿ ಸಂಶೋಧನಾ ವಿಧ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಿರುವ ವಿಷಯವನ್ನು ಪ್ರಸ್ತಾಪಿಸಿದರು. ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಘನತೆ – ಗೌರವಕ್ಕೆ ಚ್ಯುತಿ ಬರಬಹುದೆಂಬ ಆತಂಕವನ್ನು ವ್ಯಕ್ತಪಡಿಸಿದರು. ಇದಕ್ಕೆ ಸಂಬಂಧಿಸಿದಂತೆ ಮಾನ್ಯ ಕುಲಪತಿಯವರು ಎಲ್ಲಾ ಸ್ವಾಯತ್ತ ಕಾಲೇಜುಗಳಕಾರ್ಯವೈಖರಿಯನ್ನುವಾರ್ಷಿಕವಾಗಿಮರುಪರಿಶೀಲನೆಹಾಗೂಮರುಮೌಲ್ಯಮಾಪನಗೊಳಿಸಲು ಸಮಿತಿ ರಚಿಸುವುದಾಗಿ ಸಭೆಗೆ ತಿಳಿಸಿದರು. ಈ ಬಗ್ಗೆ ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯಕುಲಪತಿಯವರಿಗೆ ನೀಡಲು ಸಭೆಯಲ್ಲಿ ನಿರ್ಣಯಿಸಲಾಯಿತು.

2. ದಿನಾಂಕ 24.02.2020 ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯನಡವಳಿಗಳಲ್ಲಿ ಇತರೆ ವಿಷಯಕ್ಕೆ ಸಂಬಂಧಿಸಿ ಈ ಕೆಳಗಿನ ತಿದ್ದುಪಡಿಯೊಂದಿಗೆ ದೃಢೀಕರಿಸಲಾಯಿತು.

i. ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜಿನ150ನೇ ವರ್ಷಾಚರಣೆಯಕಾರ್ಯಕ್ರಮದಲ್ಲಿ ಸಿಂಡಿಕೇಟ್ ಸದಸ್ಯರುಗಳನ್ನು ಪ್ರೋಟೋಕಾಲ್ ಅನುಸರಿಸದೆ ಸೂಕ್ತ ಆಸನದ ವ್ಯವಸ್ಥೆಯನ್ನು ಮಾಡದೆ, ಅವರ ಆಗಮನವನ್ನು ಸ್ವಾಗತಿಸದೆ ಇರುವ ವಿಷಯವನ್ನು ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ರಮೇಶ್ ಕೆ ಅವರು ಪ್ರಸ್ತಾಪಿಸಿದರು. ಇಂತಹ ಘಟನೆಗಳು ಮುಂದಿನ ದಿನಗಳಲ್ಲಿ ಮರುಕಳಿಸದಂತೆ ಎಚ್ಚರ ವಹಿಸಲು ಕಾಲೇಜಿನ ಪ್ರಾಂಶುಪಾಲರಿಗೆ ತಿಳಿಸಲು ನಿರ್ಣಯಿಸಲಾಯಿತು.

ii. ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜಿನ 150ನೇ ವರ್ಷಾಚರಣೆಯ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಅನುದಾನ ಸೇರಿದಂತೆಸಾರ್ವಜನಿಕರಿಂದ ಸ್ವೀಕರಿಸಿದ ಒಟ್ಟು ಮೊತ್ತವನ್ನು, ಖರ್ಚು ವೆಚ್ಚಗಳ ಸವಿವರವಾದ ಮಾಹಿತಿಯನ್ನು ಒದಗಿಸುವಂತೆ ಪ್ರಾಂಶುಪಾಲರಿಗೆ ತಿಳಿಸಲು ನಿರ್ಣಯಿಸಲಾಯಿತು.ವಿಶ್ವವಿದ್ಯಾನಿಲಯ ನೀಡಿರುವ ಹಣಕ್ಕೆ ಕಾರ್ಯಕ್ರಮ ಮುಗಿದ ಒಂದು ತಿಂಗಳ ಒಳಗಡೆ ಲೆಕ್ಕಪತ್ರ ನೀಡದಿರುವುದರಿಂದ ಪ್ರಾಂಶುಪಾಲರಿಗೆ ಹಣಕಾಸು ಅಧಿಕಾರಿಯಿಂದ ತಕ್ಷಣಕ್ಕೆ ನೋಟೀಸು ನೀಡುವಂತೆ ತೀರ್ಮಾನಿಸಲಾಯಿತು. ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಲೆಕ್ಕ ಪತ್ರವನ್ನು ಮಂಡಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.

iii. ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ರಮೇಶ್ಕೆ., ಇವರು ವಿಶ್ವವಿದ್ಯಾನಿಲಯಕ್ಕೆ ಬೇರೆ ಘಟಕ ಕಾಲೇಜಿನಿಂದ ಹುದ್ದೆ ಸಮೇತ ವರ್ಗಾವಣೆಯಾಗಿ ಬಂದಿರುವ ಪ್ರಾಧ್ಯಾಪಕರ ಮಾಹಿತಿಯ ಕುರಿತಂತೆ ಪ್ರಸ್ತಾಪಿಸಿದರು. ಮಾನ್ಯ ಕುಲಪತಿಯವರು ಇದಕ್ಕೆ ಸಂಬಂಧಿಸಿದಂತೆ ಪರಿಶೀಲಿಸಿ ವರದಿ ಸಲ್ಲಿಸಲು ತನಿಖಾ ಸಮಿತಿಯನ್ನು ರಚಿಸುವುದಾಗಿ ಸಭೆಗೆ ತಿಳಿಸಿದರು. ಮುಂದುವರಿದು ಡಾ. ನಾಗಪ್ಪ ಗೌಡ, ವಿಶೇಷಾಧಿಕಾರಿ, ಕುಲಸಚಿವರ ಕಚೇರಿ ಇವರನ್ನು ತಕ್ಷಣದಿಂದ ಅನ್ವಯವಾಗುವಂತೆ ವಿಶೇಷಾಧಿಕಾರಿ ಹುದ್ದೆಯಿಂದ ಬಿಡುಗಡೆಗೊಳಿಸಿ ವಿಶ್ವವಿದ್ಯಾನಿಲಯ ಕ್ಯಾಂಪಸ್‌ನ ಸ್ನಾತಕೋತ್ತರ ಕನ್ನಡ ವಿಭಾಗಕ್ಕೆ ವರ್ಗಾವಣೆಗೊಳಿಸಲು ನಿರ್ಣಯಿಸಲಾಯಿತು.

3. ದಿನಾಂಕ 24.02.2020 ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಡವಳಿಗಳಲ್ಲಿಕಾರ್ಯಸೂಚಿ ಸಂಖ್ಯೆ::ಸಾ.ಸ.1:70(2020)ಯ ಡಾ. ಪಾರ್ವತಿ ಅಪ್ಪಯ್ಯ, ಸಿಂಡಿಕೇಟ್ ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳನ್ನುಈ ಕೆಳಗಿನ ತಿದ್ದುಪಡಿಯೊಂದಿಗೆ ದೃಢೀಕರಿಸಲಾಯಿತು.

ಡಾ. ಪಾರ್ವತಿ ಅಪ್ಪಯ್ಯ, ಸಿಂಡಿಕೇಟ್ ಸದಸ್ಯರು ಇವರು ಮಡಿಕೇರಿಯ ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜಿನ ಅಭಿವೃದ್ಧಿಗೆ ಸಂಬಂಧಪಟ್ಟಂತೆ ವಿಷಯವನ್ನು ಮಂಡಿಸಿ, ಕಳೆದ 5 ವರ್ಷಗಳಿಂದ ಕಾಲೇಜಿನಲ್ಲಿ ಹೆಚ್ಚಿನ ಅಭಿವೃದ್ಧಿ ಕಾಮಗಾರಿಗಳು ನಡೆದಿರುವುದಿಲ್ಲ. ಮುಂದಿನ ದಿನಗಳಲ್ಲಿ ಆದ್ಯತೆ ಮೇರೆಗೆ

ಕಾಲೇಜಿನಲ್ಲಿ ಹೊಸ ಕಟ್ಟಡಗಳು ಮತ್ತು ಇತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕು ಅಲ್ಲದೆ ಹೆಚ್ಚಿನ ಶಿಕ್ಷಕರು ಮಂಗಳೂರಿಗೆ ವರ್ಗಾವಣೆಯಾಗಿರುವುದರಿಂದ ಅಲ್ಲಿಯ ಬೋಧನಾ ಕಾರ್ಯಕ್ಕೆ ತೊಡಕಾಗಿರುತ್ತದೆ. ಆದುದರಿಂದ ಇನ್ನು ಮುಂದೆ ವರ್ಗಾವಣೆ ಮಾಡುವುದಾದಲ್ಲಿ ಸೂಕ್ತ ವ್ಯವಸ್ಥೆ ಮಾಡಬೇಕೆಂದು ಪ್ರಸ್ತಾಪಿಸಿದರು. ಈ ಬಗ್ಗೆ ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜನ್ನು ಸ್ನಾತಕೋತ್ತರ ಕಾಲೇಜು ಎಂದು ಮಾನ್ಯತೆ ಪಡೆಯಲು ಯು.ಜಿ.ಸಿ ಗೆ ಪತ್ರ ಬರೆಯಲು, ಕಾಲೇಜಿಗೆ ಒಂದು ಅಭಿವೃದ್ಧಿ ಸಮಿತಿಯನ್ನು ರಚಿಸಲು ಹಾಗೂ ವರ್ಗಾವಣೆ ಬಗ್ಗೆ ಎಲ್ಲರಿಗೂ ಅನ್ವಯವಾಗುವ ಮಾರ್ಗಸೂಚಿಯನ್ನು ಅಳವಡಿಸುವ ಕುರಿತು ಚರ್ಚಿಸಲಾಯಿತು.

ಈ ಬಗ್ಗೆ ಮಾನ್ಯ ಕುಲಪತಿಯವರು ಕಾಲೇಜಿನ ಅಭಿವೃದ್ಧಿ ಕುರಿತು ಸಮಿತಿ ರಚಿಸುವುದಾಗಿ ಹಾಗೂ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿಗಳ ವರ್ಗಾವಣೆ ಬಗ್ಗೆ ಮಾರ್ಗಸೂಚಿಯನ್ನು ತಯಾರಿಸಲು ಕ್ರಮಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

**3. ಅನುಸರಣಾ ವರದಿಯ ಅನುಮೋದನೆ:**

ದಿನಾಂಕ 30.12.2020 ರಂದು ನಡೆದ ಸಿಂಡಿಕೇಟಿನ 2019ನೇ ಸಾಲಿನ ಎಂಟನೆಯ ಸಾಮಾನ್ಯ ಸಭೆಯ ನಿರ್ಣಯಯಗಳ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

**4. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:**

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ವಿ.ಸ.2:1(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕ ಹುದ್ದೆಯ ಪ್ರಭಾರವನ್ನು ನೀಡುವ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕ ಹುದ್ದೆಯ ಪ್ರಭಾರವನ್ನು ನೀಡುವ ಕುರಿತಂತೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಿ ಅರ್ಜಿಯನ್ನು ಆಹ್ವಾನಿಸಲಾಗುವುದು. ಅರ್ಜಿಯಲ್ಲಿ ಬಂದ ಹೆಸರನ್ನು ಮುಂದಿನ ಸಿಂಡಿಕೇಟ್‌ನಲ್ಲಿ ಚರ್ಚಿಸಿ ಆಯ್ಕೆ ಮಾಡುವುದಾಗಿ ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ವಿ.ಸ.2:2(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಕಾರ್ಯಕಾರಿ ಅಭಿಯಂತರರ ಕಛೇರಿಯಲ್ಲಿ ಪಾಳಿಯಾಂತ್ರಿಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ದಿವಂಗತ ಶ್ರೀ ರತ್ನಕುಮಾರ್ ಹೆಚ್, ಇವರ ಪತ್ನಿ ಶ್ರೀಮತಿ ರೇವತಿ ಎ. ಇವರಿಗೆ ವಿಶ್ವವಿದ್ಯಾನಿಲಯದಲ್ಲಿ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡುವ ಬಗ್ಗೆ.

**ನಿರ್ಣಯ:** ದಿವಂಗತ ಶ್ರೀ ರತ್ನಕುಮಾರ್ ಹೆಚ್, ಇವರ ಪತ್ನಿ ಶ್ರೀಮತಿ ರೇವತಿ ಎ. ಇವರಿಗೆ ವಿಶ್ವವಿದ್ಯಾನಿಲಯದಲ್ಲಿ ದ್ವಿತೀಯ ದರ್ಜೆ ಸಹಾಯಕ ಹುದ್ದೆ ನೀಡುವ ಮುನ್ನಈ ಸಂಬಂಧ ಅವರು ಅನುಕಂಪದ ಆಧಾರದಲ್ಲಿ ಉದ್ಯೋಗ ಪಡೆಯಲು ಅರ್ಹತೆ ಹೊಂದಿದ್ದಾರೆಯೇ ಅಥವಾ ಬೇರೆ ಯಾವುದೇ ಆರ್ಥಿಕ ಮೂಲ ಹೊಂದಿದ್ದಾರೆಯೇ ಎಂಬುದನ್ನು ಪರಿಶೀಲಿಸಿ ಉದ್ಯೋಗ ಪತ್ರ ನೀಡುವ ಬಗ್ಗೆ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ವಿ.ಸ.2:3(2020)

**ವಿಷಯ:** ಬೋಧಕೇತರ ಸಿಬ್ಬಂದಿಗಳಿಗೆ ಮುಂಭಡ್ತಿ ನೀಡಿರುವ ಬಗ್ಗೆ.

**ನಿರ್ಣಯ:** ಬೋಧಕೇತರ ಸಿಬ್ಬಂದಿಗಳಿಗೆ ಮುಂಭಡ್ತಿ ನೀಡಿರುವ ಪ್ರಸ್ತಾವನೆಯನ್ನು ಪರಿಶೀಲಿಸಲು ಕಾಲಾವಕಾಶದ ಅಗತ್ಯವಿರುವ ಕಾರಣ ಮುಂದೂಡಲಾಯಿತು ಹಾಗೂ ಮುಂದಿನ ಸಭೆಯಲ್ಲಿ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರಿಕ್ಷಾಂಗ:ವಿ.ಸ.2:4(2020)

**ವಿಷಯ:** ಅಕ್ಟೋಬರ್/ನವೆಂಬರ್ 2019ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಅವ್ಯವಹಾರಗಳು–ದಂಡನೆಯನ್ನು ದೃಢಪಡಿಸುವ ಬಗ್ಗೆ.

**ನಿರ್ಣಯ:** ಪರೀಕ್ಷಾ ಅವ್ಯವಹಾರಗಳಲ್ಲಿ ತೊಡಗಿದ್ದ ವಿದ್ಯಾರ್ಥಿಗಳಿಗೆ ನೀಡಿದ ದಂಡನೆಯನ್ನು ದೃಢೀಕರಿಸಲಾಯಿತು. ಮುಂದುವರಿದು ಶಿಕ್ಷಣ ಸಂಸ್ಥೆ ಅಥವಾ ಶಿಕ್ಷಕರು ಅವ್ಯವಹಾರದಲ್ಲಿ ತೊಡಗಿದ್ದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುವುದು. ವಿಶ್ವವಿದ್ಯಾನಿಲಯದ ಅನುಶಾಸನ/ವಿನಿಯಮದಲ್ಲಿ

ಅವಕಾಶ ಇಲ್ಲದೇ ಇದ್ದಲ್ಲಿ ತಿದ್ದುಪಡಿಗೊಳಿಸಲು ಕ್ರಮ ತೆಗೆದುಕೊಳ್ಳುವುದು.ಪರೀಕ್ಷಾ ಅವ್ಯವಹಾರಗಳನ್ನು ತಡೆಗಟ್ಟುವ/ನಿಯಂತ್ರಿಸುವ ಉದ್ದೇಶದಿಂದ ಚೆಕ್ಕಿಂಗ್ ವ್ಯವಸ್ಥೆಯನ್ನು ಬಲಪಡಿಸಲು ಹಾಗೂ ಹೆಚ್ಚುವರಿ ಜಾಗೃತದಳಗಳನ್ನು ಬಳಸಿಕೊಳ್ಳಲು ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ವಿ.ಸ.2:5(2020)

**ವಿಷಯ:** ಪದವಿ ಮಟ್ಟದ ಸೆಕ್ರೆಟೇರಿಯಲ್ ಪ್ರಾಕ್ಟೀಸ್ ಮತ್ತು ಆಫೀಸ್ ಮ್ಯಾನೇಜ್‌ಮೆಂಟ್ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ.

**ನಿರ್ಣಯ:** ಪದವಿ ಮಟ್ಟದ ಸೆಕ್ರೆಟೇರಿಯಲ್ ಪ್ರಾಕ್ಟೀಸ್ ಮತ್ತು ಆಫೀಸ್ ಮ್ಯಾನೇಜ್‌ಮೆಂಟ್ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ವಿ.ಸ.2:6(2020)

**ವಿಷಯ:** ಪದವಿ ಮತ್ತು ಸ್ನಾತಕೋತ್ತರ ದೃಶ್ಯಕಲಾ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಪದವಿ ಮತ್ತು ಸ್ನಾತಕೋತ್ತರ ದೃಶ್ಯಕಲಾ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚನೆಯ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ವಿ.ಸ.2:7(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಪ್ರಭಾರ ಅಧ್ಯಕ್ಷರ ನೇಮಕಾತಿ ಬಗ್ಗೆ.

**ನಿರ್ಣಯ:** ಘಟನೋತ್ತರ ಅನುಮೋದನೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ವಿ.ಸ.2:8(2020)

**ವಿಷಯ:** ಶ್ರೀ ಕೆ. ರಮೇಶ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ – ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ರಮೇಶ್ ಕೆ., ಇವರು ಕೋವಿಡ್–19 ಲಾಕ್‌ಡೌನ್ ಸಮಯದಲ್ಲಿ ತರಗತಿಗಳನ್ನು ಹಾಗೂ ಪರೀಕ್ಷೆಗಳನ್ನು ನಡೆಸುವ ಬಗ್ಗೆ ಮಂಗಳೂರು ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮಗಳು/ಪೂರ್ವ ತಯಾರಿಗಳ ಬಗ್ಗೆ ಮಾಹಿತಿ ಒದಗಿಸಿ ಚರ್ಚಿಸುವಂತೆ ಕೋರಿದರು.

**ನಿರ್ಣಯ:** ಈ ಬಗ್ಗೆ ಮಾನ್ಯ ಕುಲಪತಿಗಳು ಎಪ್ರಿಲ್ – ಮೇ 2020 ರಲ್ಲಿ ಕುಲಪತಿಗಳಾಗಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ನೇಮಿಸಿರುವ ಸಮಿತಿಗಳಲ್ಲಿ ಭಾಗವಹಿಸಿ ನೀಡಿರುವ ಸಲಹೆ–ಸೂಚನೆಗಳ ಬಗ್ಗೆ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಲಭ್ಯವಿರುವಂತೆ ನಮ್ಮ ಟಿ.ವಿ, ಮಂಗಳೂರು ಆಕಾಶವಾಣಿ, 92.7 Big F.M, ಗ್ಲೋಬಲ್ ಟಿ.ವಿ, ವಿಜಯ ಕರ್ನಾಟಕ ಹಾಗೂ ಉದಯವಾಣಿ ಪತ್ರಿಕೆಗಳಲ್ಲಿ Phone-inಕಾರ್ಯಕ್ರಮಗಳಲ್ಲಿ ಕೋವಿಡ್–19 ಹಾಗೂ ಅದರ ತತ್ಪರಿಣಾಮವಾಗಿ ವಿದ್ಯಾರ್ಥಿಗಳ ಹಾಗೂ ಪೋಷಕರ ಮನಸ್ಸಿನಲ್ಲಿ ತರಗತಿ, ಪರೀಕ್ಷೆ, ಫಲಿತಾಂಶ, ಉದ್ಯೋಗಗಳ ಬಗ್ಗೆ ಇದ್ದಂತಹ ಗೊಂದಲ ಮತ್ತು ಆತಂಕಗಳನ್ನು ದೂರ ಮಾಡುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿರುವ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿದರು. ಯಾವುದೇ ವಿಶ್ವವಿದ್ಯಾನಿಲಯ ಈ ಸಮಯ – ಸಂದರ್ಭದಲ್ಲಿ ತರಗತಿ–ಪರೀಕ್ಷೆ ಫಲಿತಾಂಶ ಘೋಷಣೆ ವಿಚಾರಗಳಲ್ಲಿ ಅದರದ್ದೇ ನಿರ್ಣಯಗಳನ್ನು ಏಕಾಏಕಿಯಾಗಿ ನೀಡಲು ಬರುವುದಿಲ್ಲ. ಯುಜಿಸಿ ಮಾರ್ಗಸೂಚಿಗಳು, ಹಾಸ್ಟೆಲ್, ತರಗತಿಗಳನ್ನು ಕೋವಿಡ್ – 19 ಶಿಷ್ಟಾಚಾರದಂತೆ ಜಾಗ್ರತೆ ವಹಿಸಿ ನಡೆಸುವ ಬಗ್ಗೆ, ಬದಲಾದ ಸನ್ನಿವೇಶದಲ್ಲಿ ಪರೀಕ್ಷೆ– ಫಲಿತಾಂಶಗಳ ಬಗ್ಗೆ ತೆಗೆದುಕೊಳ್ಳಬೇಕಾದ ನಿರ್ಣಾಯಗಳ ಬಗ್ಗೆ ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ಅನ್ವಯವಾಗುವಂತೆ ಏಕರೂಪದ ಶೈಕ್ಷಣಿಕ ವೇಳಾ ಪಟ್ಟಿ ಹಾಗೂ ಪರೀಕ್ಷಾ ವಿಧಿ ವಿಧಾನಗಳ ಬಗ್ಗೆ ಸರಕಾರದಿಂದ ಸಮಿತಿಗಳ ಶಿಫಾರಸ್ಸು ಹಾಗೂ ಯುಜಿಸಿ ಮಾರ್ಗಸೂಚಿಯನ್ನು ಪರಿಗಣಿಸಿ ಸದ್ಯದಲ್ಲೇ ನಿರ್ದೇಶನ ಬರಲಿದೆ. ತದನಂತರ ಮಂಗಳೂರು ವಿಶ್ವವಿದ್ಯಾನಿಲಯ ಸರಕಾರದ ನಿರ್ದೇಶನದಂತೆ ಶೈಕ್ಷಣಿಕ ವೇಳಾಪಟ್ಟಿ, ಪರೀಕ್ಷೆ – ಫಲಿತಾಂಶ ಘೋಷಣೆ ಬಗ್ಗೆ ಸುತ್ತೋಲೆ ಹೊರಡಿಸಲಿದೆ. ಮೇ 31, 2020 ರವರೆಗೆ ಎಲ್ಲಾ ಕಾಲೇಜು ಮತ್ತು ವಿಶ್ವವಿದ್ಯಾನಿಲಯದ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು online ಮೂಲಕ ಪಾಠ –ಪ್ರವಚನಗಳಲ್ಲಿ

ತೊಡಗಿಕೊಳ್ಳುವಂತೆ ನಿರ್ದೇಶಿಸಲಾಗಿದೆ. ಅದೇ ರೀತಿ AMUCT, ಪ್ರಾಂಶುಪಾಲರುಗಳ ಸಂಘ, ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರುಗಳಿಂದ onlineಪಾಠ, ಕಲಿಕೆ,ಉಪಯುಕ್ತತೆ ಬಗ್ಗೆ ಮಾಹಿತಿ ಕಲೆ ಹಾಕಲಾಗಿದೆ. ಈ ಲಾಕ್‌ಡೌನ್ ಸಮಯದಲ್ಲಿ ಬೇರೆ ಉಪಾಯವಿಲ್ಲದೆ onlineಮೊರೆಹೋಗುವ ಅನಿವಾರ್ಯತೆ ಇದ್ದು ಬಹುತೇಕ ಮಟ್ಟಿಗೆ ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಮನೆಯಲ್ಲಿಯೇ ಇದ್ದು ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಪ್ರಯೋಜನಕಾರಿಯಾಗಿದೆ ಎಂಬ ಅಂಶವನ್ನು ಸದಸ್ಯರುಗಳ ಗಮನಕ್ಕೆ ತರಲಾಯಿತು

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ವಿ.ಸ.2:9(2020)

**ವಿಷಯ:** ಪದವಿ ಮಟ್ಟದ ಬಿಸಿನೆಸ್ ಅಡ್ಮಿನಿಸ್ಟ್ರೇಶನ್ (ಬಿ.ಬಿ.ಎ) ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ.

**ನಿರ್ಣಯ:** ಪದವಿ ಮಟ್ಟದ ಬಿಸಿನೆಸ್ ಅಡ್ಮಿನಿಸ್ಟ್ರೇಶನ್ (ಬಿ.ಬಿ.ಎ) ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ವಿ.ಸ.2:10(2020)

**ವಿಷಯ:** ಪದವಿ ಮಟ್ಟದ ಹೋಟೇಲ್ ಮ್ಯಾನೇಜ್‌ಮೆಂಟ್ (ಬಿ.ಹೆಚ್.ಎಮ್) ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ.

**ನಿರ್ಣಯ:** ಪದವಿ ಮಟ್ಟದ ಹೋಟೇಲ್ ಮ್ಯಾನೇಜ್‌ಮೆಂಟ್ (ಬಿ.ಹೆಚ್.ಎಮ್) ಅಧ್ಯಯನ ಮಂಡಳಿಯನ್ನು ಪುನರ್ರಚಿಸುವಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ವಿ.ಸ.2:11(2020)

**ವಿಷಯ:** ಹಣಕಾಸು ಸಮಿತಿಗೆ ಸಿಂಡಿಕೇಟ್‌ನಿಂದ ಓರ್ವ ಸದಸ್ಯರ ನಾಮನಿರ್ದೇಶನದ ಬಗ್ಗೆ.

**ನಿರ್ಣಯ:** ಹಣಕಾಸು ಸಮಿತಿಗೆ ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ಮೋಹನ್ ಪಡಿವಾಳ ಇವರನ್ನು ನಾಮ ನಿರ್ದೇಶನ ಮಾಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ: ವಿ.ಸ.2:12(2020)

**ವಿಷಯ:** ಶ್ರೀಮತಿ ಪ್ರಭಾವತಿ, ಪ್ರಥಮ ದರ್ಜೆ ಸಹಾಯಕರು, ಕುಲಸಚಿವರ ಕಛೇರಿ ಇವರಿಗೆ ವಿಶ್ವವಿದ್ಯಾನಿಲಯದ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಶ್ರೀಮತಿ ಪ್ರಭಾವತಿ, ಪ್ರಥಮ ದರ್ಜೆ ಸಹಾಯಕರು, ಕುಲಸಚಿವರ ಕಛೇರಿ ಇವರಿಗೆ ವಿಶ್ವವಿದ್ಯಾನಿಲಯದ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದುವ ವಿಷಯವನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ: ವಿ.ಸ.2:13(2020)

**ವಿಷಯ:** ಡಿಎಸ್ಟಿ - ಪರ್ಸ್ ಪ್ರಯೋಗಾಲಯಕ್ಕೆ ಜಿ.ಸಿ.ಎಮ್.ಎಸ್ ಉಪಕರಣ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಜಿ.ಸಿ.ಎಂ.ಎಸ್ ಉಪಕರಣವನ್ನು ಡಿಎಸ್ಟಿಪರ್ಸ್ ಯೋಜನೆಯಡಿ ಖರೀದಿಸುವ ಹಾಗೂ ಈ ಉಪಕರಣ ಖರೀದಿಗೆ ತಗಲುವ ಹೆಚ್ಚುವರಿ ಮೊತ್ತವನ್ನು ಡಿಎಸ್ಟಿಪರ್ಸ್ ಅನುದಾನದಿಂದ ಸ್ವೀಕೃತವಾದ ಬಡ್ಡಿ ಮೊತ್ತ ಹಾಗೂ ಮುಂದಕ್ಕೆ ಹೊಂದಾಣಿಕೆ ಮಾಡಿಕೊಳ್ಳುವ ಷರತ್ತಿನ ಮೇರೆಗೆ ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿಯಿಂದ ಡಿಎಸ್ಟಿಪರ್ಸ್ ಖಾತೆಗೆ ವರ್ಗಾಯಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ವಿ.ಸ.2:14(2020)

**ವಿಷಯ:** ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಶ್ರೀ ಸ್ವಾಮಿನಾಥನ್ ಇವರನ್ನು ಹಿರಿಯ ಸಹಾಯಕ ಹುದ್ದೆಯಲ್ಲಿಯೇ ಮುಂದುವರಿಸಬೇಕಾದುದರಿಂದ ಸದರಿ ವೃಂದದಲ್ಲಿ ಸಂಖ್ಯಾತಿರಿಕ್ತ ಹುದ್ದೆಯನ್ನು ಸೃಜಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ವಿ.ಸ.2:15(2020)

**ವಿಷಯ:** ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಮಂಡಳಿಯನ್ನು ಪರಿಷ್ಕರಿಸಿ ಪುನರ್ರಚಿಸುವ ಬಗ್ಗೆ.

**ನಿರ್ಣಯ:** ಪ್ರೊ. ವಿಶ್ವನಾಥ ಇವರನ್ನು ಬಾಕಿ ಉಳಿದಿರುವ ಅವಧಿಗೆ ಅಧ್ಯಕ್ಷರನ್ನಾಗಿ ನಾಮನಿರ್ದೇಶನ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ವಿ.ಸ.2:16(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳ ನೇಮಕಾತಿ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳ ನೇಮಕಾತಿ ಬಗ್ಗೆ ಪರಿಶೀಲಿಸಲು ಸಮಯಾವಕಾಶದ ಅಗತ್ಯವಿದ್ದ ಕಾರಣ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ವಿ.ಸ.2:17(2020)

**ವಿಷಯ:** ಕಂಪ್ಯೂಟರ್/ಪ್ರಿಂಟರ್‌ಗಳ ವಾರ್ಷಿಕ ನಿರ್ವಹಣೆಗೆ ನೀಡಿದ ಗುತ್ತಿಗೆ ಅವಧಿಯನ್ನು ವಿಸ್ತರಿಸುವ ಬಗ್ಗೆ.

**ನಿರ್ಣಯ:** ಕಂಪ್ಯೂಟರ್/ಪ್ರಿಂಟರ್‌ಗಳ ವಾರ್ಷಿಕ ನಿರ್ವಹಣೆಗೆ ನೀಡಿದ ಗುತ್ತಿಗೆ ಅವಧಿಯನ್ನು ಇ–ಟೆಂಡರ್‌ನ ಪ್ರಕ್ರಿಯೆ ಪೂರ್ಣಗೊಳಿಸಲು ಸ್ವಲ್ಪ ಸಮಯ ತಗಲುವುದರಿಂದದಿನಾಂಕ 31.07.2020 ರವರೆಗೆ ವಿಸ್ತರಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**5. ಇತರ ವಿಷಯ ಗಳು:**

1. ಶೀಘ್ರಲಿಪಿಗಾರರ ಮುಂಭಡ್ತಿ ಸಂಬಂಧದ ಪ್ರಸ್ತಾವನೆಯನ್ನು ಸರಕಾರಕ್ಕೆ ಸಲ್ಲಿಸಲು ಕಳೆದ ಸಿಂಡಿಕೇಟು ಸಭೆಯಲ್ಲಿ ನಿರ್ಣಯಿಸಲಾಗಿದ್ದರೂ ಕಳುಹಿಸದೇ ಇರುವ ಬಗ್ಗೆ ಶ್ರೀ ರಮೇಶ್ ಕೆ ಇವರ ಪ್ರಸ್ತಾವನೆ.

   ಈ ವಿಚಾರವನ್ನು ಪರಿಶೀಲಿಸಿ ವಿಶ್ವವಿದ್ಯಾನಿಲಯದ ಎಲ್ಲಾ ವೃಂದಗಳಿಗೆ ಸಂಬಂಧಿಸಿ ಅಥವಾ ಕೇವಲ ಶೀಘ್ರಲಿಪಿಗಾರರಿಗೆ ಸಂಬಂಧಿಸಿದ ನಿರ್ಣಯವನ್ನು ಸರಕಾರಕ್ಕೆ ಕಳುಹಿಸುವುದೇ ಎಂದು ಎರಡು ವಾರದ ಒಳಗೆ ತೀರ್ಮಾನಿಸಲಾಗುವುದು. ಸದರಿ ತಿದ್ದುಪಡಿಯ ಬಗ್ಗೆಸರ್ಕಾರದಿಂದ ಸ್ಪಷ್ಟತೆ ಬಂದ ನಂತರ ಮುಂಭಡ್ತಿ ನಿರ್ಧರಿಸುವುದು ಸೂಕ್ತ ಎಂದು ಕುಲಸಚಿವರು ಅಭಿಪ್ರಾಯ ವ್ಯಕ್ತಪಡಿಸಿದರು.

2. ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀರಮೇಶ್ ಕೆ., ಇವರು ಸಿ ಸಿ ಟಿ.ವಿ , ಸೋಲಾರ್ ಅಳವಡಿಕೆ ಬಗೆಗಿನ ಆಂತರಿಕ ಪರಿಶೀಲನಾ ಸಮಿತಿಯ ಮೊದಲ ಪರಿಶೀಲನಾ ಸಭೆ ದಿನಾಂಕ 13.02.2020 ರಂದು ನಡೆದಿದ್ದು,ಈ ಸಮಿತಿಗೆ ದಾಖಲೆಗಳನ್ನು ಸಮಯಕ್ಕೆ ಸರಿಯಾಗಿ ನೀಡದೆ ತಡ ಮಾಡಿದ್ದು, ಕೆಲವೊಂದು ಅಗತ್ಯ ದಾಖಲೆಗಳನ್ನು ಇನ್ನೂ ನೀಡಿರುವುದಿಲ್ಲ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು. ದಾಖಲೆಗಳನ್ನು ನೀಡದಿರುವ ಕಾರ್ಯನಿರ್ವಾಹಕರನ್ನು ಯಾಕೆ ವರ್ಗಾವಣೆಗೊಳಿಸಬಾರದಾಗಿ ತಿಳಿಸಿದರು.

   ದಾಖಲೆ ನೀಡದೇ ಇರುವ ಕಾರ್ಯ ನಿರ್ವಾಹಕರ ಬಗ್ಗೆ ಮಾಹಿತಿಯನ್ನು ಕುಲಸಚಿವರಿಗೆ ನೀಡುವಂತೆ ಮಾನ್ಯಕುಲಪತಿಗಳು ತಿಳಿಸಿದರು.

3. ಮಾನ್ಯ ಕುಲಪತಿಗಳು ವಿಶ್ವವಿದ್ಯಾನಿಲಯದ ಸಿಬ್ಬಂದಿಗಳು ಕಚೇರಿ ಕರ್ತವ್ಯಕ್ಕೆ ಹಾಜರಾಗಲು ಅನುಕೂಲವಾಗುವಂತೆ ಹೊರಗುತ್ತಿಗೆ ಮೂಲಕ ಬಸ್ ಸೌಲಭ್ಯವನ್ನು ಸಿಬ್ಬಂದಿಗಳಿಗೆ ತಿಂಗಳ ಬಸ್ ಪಾಸ್ ಆಧಾರದಲ್ಲಿ ಮಾಡುವ ಪ್ರಸ್ತಾವನೆಯನ್ನು ಮಂಡಿಸಿದರು. ಪ್ರಸ್ತುತ ವಿಶ್ವಮಂಗಳ ವಿದ್ಯಾಸಂಸ್ಥೆಯ ಬಸ್ಸುಗಳನ್ನು ಸಿಬ್ಬಂದಿಗಳ ಅನುಕೂಲಕ್ಕಾಗಿ ಬಳಸುತ್ತಿರುವ ವಿಷಯವನ್ನು ತಿಳಿಸಿದರು.

   ಕರ್ನಾಟಕ ರಾಜ್ಯ ರಸ್ತೆಸಾರಿಗೆ ನಿಗಮದ ಅಧ್ಯಕ್ಷರಿಗೆ ಬಸ್ ಸೌಲಭ್ಯ ಒದಗಿಸುವ ಬಗ್ಗೆ ಪತ್ರ ಬರೆಯಲು ಸಭೆಯು ನಿರ್ಣಯಿಸಿತು.

4. ಕೋವಿಡ್ – 19 ಎಂಬ ಮಹಾಮಾರಿ ನಮ್ಮ ಜೀವನದಲ್ಲಿ ಕರುಣೆಯ ಬದಲಿಗೆ ಅನುಕಂಪ ಹಾಗೂ ಸಹಾನುಭೂತಿಯನ್ನು ವ್ಯಕ್ತಪಡಿಸುವ ಮನಸ್ಸುಗಳನ್ನು ಉತ್ತೇಜಿಸುವ ಅಗತ್ಯತೆಯನ್ನು ತೋರಿಸಿಕೊಟ್ಟಿದೆ. ಈ ಹಿನ್ನೆಲೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು, ಶಿಕ್ಷಕ –ಶಿಕ್ಷಕೇತರ ಸಿಬ್ಬಂದಿಗಳು ಬಳಸದೆ/ಪುನರ್‌ಬಳಕೆ ಮಾಡದೇ ಇರುವ ಅನೇಕ ವಸ್ತುಗಳನ್ನು (ಉದಾ: ಬಟ್ಟೆ ಬರೆಗಳು, ಪುಸ್ತಕಗಳು,

ಆಟಿಕೆ ಸಾಮನುಗಳು) ಅಲ್ಲಿ – ಇಲ್ಲಿಎಸೆಯದೆ ಇತರರು ಗೌರವಾನ್ವಿತರಾಗಿ ಪಡೆದುಕೊಳ್ಳಲು ಯೋಗ್ಯವಾದ'Wall of Kindness' ಪ್ರಾರಂಭಿಸುವ ಬಗ್ಗೆ ಮಾನ್ಯ ಕುಲಪತಿಗಳು ಸಭೆಯಲ್ಲಿ ಪ್ರಸ್ತಾಪಿಸಿದಾಗ ಸಿಂಡಿಕೇಟು ಸಭೆಯು ಪ್ರಶಂಸೆ ಹಾಗೂ ಒಪ್ಪಿಗೆ ನೀಡಿತು.

5. ಕೋವಿಡ್ –19 ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಉದ್ಯೋಗಸ್ಥ ಮಹಿಳೆಯರ ಹಾಸ್ಟೆಲ್‌ನ್ನು ಜಿಲ್ಲಾಡಳಿತದ ವಶಕ್ಕೆ ನೀಡಿರುವ ವಿಷಯವನ್ನು ಸಿಂಡಿಕೇಟು ಸಭೆಯ ಗಮನಕ್ಕೆ ತರಲಾಯಿತು. ಅದೇ ರೀತಿ ಅಗತ್ಯವಿದ್ದಲ್ಲಿ ಜಿಲ್ಲಾಡಳಿತವು ವಿಶ್ವವಿದ್ಯಾನಿಲಯದ ಪುರುಷರ ಮತ್ತು ಮಹಿಳೆಯರ ಹಾಸ್ಟೆಲ್‌ಗಳನ್ನು ಬೇರೆ ರಾಜ್ಯ ಮತ್ತು ವಿದೇಶದಿಂದ ಆಗಮಿಸುವ ನಾಗರಿಕರಿಗೆ Quarantineಗಾಗಿ ಬಳಸಿಕೊಳ್ಳಬಹುದು ಎನ್ನುವ ವಿಷಯವನ್ನು ಸಿಂಡಿಕೇಟು ಸಭೆಯ ಗಮನಕ್ಕೆ ತರಲಾಯಿತು.

6. ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ಮೋಹನ್ ಪಡಿವಾಳ್ ಇವರು ಪೋಸ್ಟ್ ಕೋವಿಡ್ ದಿನಗಳಲ್ಲಿ ನಮ್ಮ ಆಹಾರ ಪದ್ಧತಿಯು ಮಹತ್ವ ಪಡೆದಿದೆ. ಫುಡ್ ಸಾಯನ್ಸ್ ಮತ್ತು ನ್ಯೂಟ್ರಿಷಿಯನ್ ಕೋರ್ಸ್‌ನ್ನು ಸ್ವತಂತ್ರವಾಗಿ 2020–21ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭ ಮಾಡುವ ಬಗ್ಗೆ ಪ್ರಸ್ತಾಪಿಸಿದರು.

ತೀರ್ಮಾನ ತೆಗೆದುಕೊಳ್ಳುವ ಮೊದಲು 5 ವರ್ಷದ ಅವಧಿಯಲ್ಲಿ ಫುಡ್ ಸಾಯನ್ಸ್ ಮತ್ತು ನ್ಯೂಟ್ರಿಷಿಯನ್ ಕೋರ್ಸ್ ಸೇರಿ ಯಾವುದೆಲ್ಲ ಸ್ನಾತಕ ಹಾಗೂ ಸ್ನಾತಕೋತ್ತರ ಪ್ರೋಗ್ರಾಂಗಳಿಗೆ ವಿದ್ಯಾರ್ಥಿಗಳ ನೋಂದಣಿಯ ಏರಿಳಿತದ ಬಗ್ಗೆ ಮಾಹಿತಿ ಕಲೆ ಹಾಕಿ, Admission Review Committee ಯು ಸದ್ಯದಲ್ಲೇ ಸಭೆ ಸೇರಲಿದ್ದು, ಹೊಸ ಶೈಕ್ಷಣಿಕ ಪ್ರೋಗ್ರಾಂಗಳನ್ನು 2020–21 ನೇ ವರ್ಷದಿಂದ ಪ್ರಾರಂಭ ಮಾಡುವ ಅವಕಾಶಗಳ ಬಗ್ಗೆ ಸಮಗ್ರ ವರದಿ ಪಡೆದು ಸಿಂಡಿಕೇಟು ಸಭೆಗೆ ಇಡಲಾಗುವುದು. ಸ್ವತಂತ್ರ ವಿಭಾಗ ಮಾಡಬೇಕೆಂದಾದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಮಾನ್ಯ ಕುಲಪತಿಯವರು ತಿಳಿಸಿದರು.

7. ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ ಕಾಲೇಜುಗಳಲ್ಲಿರುವ ಕೆಲವೊಂದು ಶಿಕ್ಷಕರು ಸರಕಾರದ ಅಥವಾ ವಿಶ್ವವಿದ್ಯಾನಿಲಯದ ನಿರ್ಣಯಗಳ ಬಗ್ಗೆವಿವಾದಾತ್ಮಕ ಹೇಳಿಕೆಗಳನ್ನು ಬರವಣಿಗೆ/ಪತ್ರಿಕೆಗಳ ಮೂಲಕ ನೀಡುತ್ತಿದ್ದು ಅವರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳುವುದು ಸೂಕ್ತವೆಂದು ಹಾಗೂ ಅಂತಹವರನ್ನು ವಿಶ್ವವಿದ್ಯಾನಿಲಯವು ಸಮಿತಿಗಳಿಗೆ ನೇಮಿಸುವುದು ಔಚಿತ್ಯ ಪೂರ್ಣವಾದುದಲ್ಲವೆಂಬ ಅಭಿಪ್ರಾಯವನ್ನು ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀರಮೇಶ್ ಕೆ., ಇವರು ವ್ಯಕ್ತಪಡಿಸಿದರು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/–
ಕುಲಸಚಿವರು

ಸಹಿ/–
ಕುಲಪತಿಗಳು